**ಸಿ.ಸಿ. ನಂಬರ 454/2022**

ಪಿಡಬ್ಲ್ಯೂ-1

ಸಾಕ್ಷಿದಾರರಿಗೆ ಇಂದು ದಿನಾಂಕಃ 19-12-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಎ.ಎನ್ ವಕೀಲರಿಂದಃ**

ನಾನು ಬಿಕಾಂ ಪಧವಿಧರೆಯಾಗಿರುತ್ತೇನೆ. ನಾನು ಈಗ ಎಲ್ ಎಸ್ ಎಂ ಪಿ ಸೊಸೈಟಿಯಲ್ಲಿ ಕಳೆದ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನಾವು ಮೂಲತಃ ಜಂಗಮರು . ನಿಮ್ಮ ಸಂಪ್ರದಾಯದ ಪ್ರಕಾರ ಮನೆಯಲ್ಲಿ ಯಾರಾದರು ತೀರಿಕೊಂಡಲ್ಲಿ ಒಂದು ತಿಂಗಳ ಒಳಗೆ ಮತ್ತು ಒಂದು ವರ್ಷದ ನಂತರ ಯಾವುದೇ ಶುಭ ಕಾರ್ಯಗಳನ್ನು ಮಾಡುವುದಿಲ್ಲ ಎಂದರೆ ಒಂದು ವರ್ಷದ ಒಳಗೆ ಮಾಡುತ್ತೇವೆ ಎಂದು ನುಡಿದಿರುತ್ತಾರೆ. ನಮ್ಮ ತಂದೆಯವರು ತೀರಿಕೊಂಡ ನಂತರ 9 ನೇ ದಿನಕ್ಕೆ ಕಾರ್ಯವನ್ನು ಮಾಡಿ ಮುಗಿಸಿರುತ್ತೇವೆ . ನನ್ನ ತಂದೆಯವರು ದಿಃ 28-05-2022 ರಂದು ತೀರಿಕೊಂಡಿರುತ್ತಾರೆ. ಆಗ ನಾನು ಆಜಾದ್ ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದೆನು. ಸದರಿ ಸೊಸೈಟಿಯಲ್ಲಿ 2019 ನೇ ಇಸ್ವಿಯ ಕೊನೆಯಲ್ಲಿ ಹಾಜರಾಗಿದ್ದೆನು. ಅಲ್ಲಿ ನನಗೆ 9 ಸಾವಿರ ರೂಪಾಯಿ ವೇತನ ಇತ್ತು. ಸದರಿ ಸಂಬಳದಿಂದ ನಾನು ಹಣವನ್ನು ಉಳಿತಾಯ ಮಾಡಿದ್ದೆನು. ಉಳಿತಾಯದ ಹಣವನ್ನು ಸದರಿ ಸೊಸೈಟಿಯಲ್ಲಿಯೇ ನನ್ನ ಖಾತೆಯಲ್ಲಿ ಇರುಸುತ್ತಿದ್ದೆನು. ನನ್ನ ಉಳಿತಾಯ ಖಾತೆಯಲ್ಲಿ ಸುಮಾರು 3 ಲಕ್ಷ ರೂಪಾಯಿಯವರೆಗೆ ಜಮೆ ಆಗಿತ್ತು. ಸದರಿಯದನ್ನು ನಾನು ಜೂನ್ 21, 2022 ರಲ್ಲಿ ವಿತ್ ಡ್ರಾಮಾಡಿರುತ್ತೇನೆ. ಆ ಕುರಿತು ಸ್ಟೇಟಮೆಂಟ್ ಆಫ್ ಅಕೌಂಟ್ ಇರುತ್ತದೆ ಎಂದರೆ ನಿಜ. ಸದರಿಯದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ನೀವು ದಿಃ 21-06-2022 ರಂದು ಆಜಾದ್ ಬ್ಯಾಂಕಿನಿಂದ 3 ಲಕ್ಷ ಹಣವನ್ನು ಬಿಡುಗಡೆ ಮಾಡಿಕೊಂಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆ ರೀತಿ ಹಣವನ್ನು ಬಿಡುಗಡೆಗೊಳಿಸಿಕೊಂಡಿರುವ ಬಗ್ಗೆ ನನ್ನ ಕಾನೂನಿನ ತಿಳುವಳಿಕೆಯಲ್ಲಾಗಲೀ ಮತ್ತು ಮುಖ್ಯ ವಿಚಾರಣೆಯಲ್ಲಾಗಲೀ ನಮೂದಿಸಿರುವುದಿಲ್ಲ. ಆ ಕುರಿತು ನಿಮಗೆ ಬೇಕಾದ ಹಾಗೆ ಸೃಷ್ಠಿಸಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

2. ನಮ್ಮ ತಂದೆಗೆ ನಾನು 4 ನೇ ಮಗಳು. ನಮ್ಮ ತಂದೆ ಯವರು ಎಲ್ ಎಸ್ ಎಂ ಸೊಸೈಟಿಯಲ್ಲಿ ಮುಖ್ಯ ಕಾರ್ಯನಿರ್ವಾಹಕರಾಗಿದ್ದರು. ನಮ್ಮ ತಂದೆಯವರು ಮುಖ್ಯ ಕಾರ್ಯ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದಾಗ ಸೊಸೈಟಿಯಲ್ಲಿ ಅಪರತಪರ ಆಗಿ ಮೀಟಿಂಗ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಕುರಿತು ರೈತರು ಮುಷ್ಕರ ಹೂಡಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಆಡಳಿತ ಸಭೆಯಲ್ಲಿ ಇರಿಸಿ ಅದಕ್ಕೆ ನಿಮ್ಮ ತಂದೆಯವರೇ ಹೊಣೆಗಾರರೆಂದು ತೀರ್ಮಾನಿಸಿದ್ದರು ಎಂದರೆ ಸರಿಯಲ್ಲ. ಆಗ ನಿಮ್ಮ ತಂದೆಯವರಿಗೆ ಹಣಕಾಸಿನ ಅಡಚಣೆ ಇದ್ದಾಗ ಅವರು ದೈವಜ್ಞ ಕೋ ಆಪರೇಟಿವ್ ಸೊಸೈಟಿಯಲ್ಲಿ 12 ಲಕ್ಷ ರೂಪಾಯಿಗಳ ಸಾಲಕ್ಕಾಗಿ 2019 ನೇ ಇಸ್ವಿಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಸಾಲಕ್ಕೆ ಆರೋಪಿತನು ಮತ್ತು ಮಿತ್ರಿಕೋಟಿ ಎಂಬುವವರು ಜಾಮೀನುದಾರರಾಗಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಆರೋಪಿತನ ಬಳಿಯಿಂದ ನಿಮ್ಮ ತಂದೆಯವರು ಸಾಲದ ಭದ್ರತೆಗಾಗಿ ಜಾಮೀನಿಗಾಗಿ ಎರಡು ಚೆಕ್ಕುಗಳನ್ನು ಕೇಳುತ್ತಿದ್ದಾರೆ ಕೊಡು ಎಂದು ಕೇಳಿದ್ದನು ಎಂದರೆ ಸರಿಯಲ್ಲ . ನಿಮ್ಮ ತಂದೆಯ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇಲ್ಲದೇ ಇದ್ದಿದ್ದರಿಂದ ಮಿತ್ರಿಕೋಟಿ ಎಂಬುವವರ ಆಸ್ತಿಗಳನ್ನು ಜಾಮೀನಿಗೆ ಇಟ್ಟಿದ್ದರು ಎಂದರೆ ಸರಿಯಲ್ಲ . ನಮ್ಮ ತಂದೆಯವರ ಹೆಸರಿನಲ್ಲಿ ಜಮೀನುಗಳು ಇರುವುದಿಲ್ಲ . ನಿಮ್ಮ ತಂದೆಯವರು ಹಾಕಿದ ಅರ್ಜಿಯನ್ನು ದೈವಜ್ಞ

ಸೊಸೈಟಿಯವರು ಮಿಶ್ರಿಕೋಟಿಯವರ ಆಸ್ತಿಯನ್ನು ಪ್ಲೆಡ್ಜ ಮಾಡಿಕೊಂಡ ನಂತರ ತಿರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ . ದಿಃ 13-05-2019 ರಂದು ದೈವಜ್ಞ ಸೊಸೈಟಿಯವರು ಉಪನೋಂದಣಾಧಿಕಾರಿರವರ ಕಛೇರಿಯಲ್ಲಿ ಆಧಾರ್ ಖುಲಾಸೆ ಪತ್ರದ ಮೂಲಕ ಖುಲಾಸೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಸದರಿಯದ್ದಕ್ಕೂ ಸಹ ಆರೋಪಿತನೇ ಸಾಕ್ಷಿದಾರನಾಗಿರುತ್ತಾನೆ ಎಂದರೆ ಸರಿಯಲ್ಲ. ಆನಂತರ ಆರೋಪಿತನು ಸೇಂಟ್ ಮಿಲಾಗ್ರಿಸ್ ಸೊಸೈಟಿಯಲ್ಲಿ 2021 ನೇ ಇಸ್ವಿಯಲ್ಲಿ 1 ಕೋಟಿ 10 ಲಕ್ಷ ಸಾಲವನ್ನು ಪಡೆದುಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ . ಸದರಿನೇದ್ದಕ್ಕೆ ನಿಮ್ಮ ತಂದೆ ಜಾಮೀನುದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಲವು ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆಯವರು ಮತ್ತು ಆರೋಪಿತರು ಬಹಳ ಆತ್ಮೀಯರಾಗಿದ್ದರು ಎಂದರೆ ನಿಜ . ನನ್ನನ್ನು ಆರೋಪಿತರು ಈ ಮೊದಲು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಎರಡು ಚೆಕ್ಕುಗಳು ನಿಮ್ಮ ತಂದೆಯ ಬಳಿ ಇದ್ದವು, ಅದನ್ನು ಅವನು ಮೇಲಿಂದ ಮೇಲೆ ಕೇಳುತ್ತಾ ಬಂದಿದ್ದನು ಎಂದರೆ ಸರಿಯಲ್ಲ . ನಿಮ್ಮ ತಂದೆಯವರು ತಮ್ಮ ಕಛೇರಿಯ ಡ್ರಾವರ್ ನಲ್ಲಿ ಇವೆ ನಂತರ ಕೊಡುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ . ನಿಮ್ಮ ತಂದೆಯವರು ಸಾಯುವುದಕ್ಕಿಂತ ಮುಂಚೆ ಆರೋಪಿತನು ನಿಮ್ಮ ತಂದೆಗೆ ಚೆಕ್ಕನ್ನು ಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ . ನಮ್ಮ ತಂದೆಯವರಿಗೆ ಅನಾರೋಗ್ಯ ಇದ್ದುದ್ದರಿಂದ ಆರೋಪಿತನು ಮಾತನಾಡಿಸಿ ಹೋಗಿರುತ್ತಾನೆ. ನಿಮ್ಮ ತಂದೆಯವರು ದಿಃ 28-05-2022 ರಂದು ತೀರಿಕೊಂಡಿರುತ್ತಾರೆ ಎಂದರೆ ನಿಜ. ನಿಮ್ಮ ಮನೆಯಲ್ಲಿ ಶೋಕಾಚರಣೆ ಇದ್ದುದ್ದರಿಂದ ಆರೋಪಿತನು ನಿಮ್ಮೊಂದಿಗೆ ಯಾವುದೇ ವಿಷಯವನ್ನು ಚರ್ಚಿಸಿರುವುದಿಲ್ಲ ಎಂದರೆ ಸರಿಯಲ್ಲ . ನಂತರ ಆರೋಪಿತನಿಗೆ ನಿಮ್ಮ ತಂದೆಯ ಕಛೇರಿಯಲ್ಲಿರುವ ಡ್ರಾವರಿನ ಪಂಚನಾಮೆಯನ್ನು ಮಾಡಿರುವ ಬಗ್ಗೆ ತಿಳಿದುಬಂದಿರುತ್ತದೆ ಎಂದರೆ ನಿಜ. ಸದರಿ ಡ್ರಾವರಿನಲ್ಲಿ ಇದ್ದಂತಹ ಎಲ್ಲಾ ಐಟಂಗಳನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ನಿಜ . ಸದರಿಯವುಗಳಲ್ಲಿ ಆರೋಪಿತನು ನೀಡಿದ ಎರಡು ಚೆಕ್ಕುಗಳು ಇದ್ದವು ಎಂದರೆ ಯಾವುದೇ ಚೆಕ್ಕುಗಳು ಇರಲಿಲ್ಲ ಎಂದು ನುಡಿದಿರುತ್ತಾರೆ . ಸದರಿ ವಿಷಯವು ಪಂಚನಾಮೆಯನ್ನು ಜರುಗಿಸಿದ ಅಧಿಕಾರಿಯ ಮುಖಾಂತರ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ . ಬ್ಯಾಂಕಿನ ಅಧಿಕಾರಿಗಳು ಆರೋಪಿತನು ನೀಡಿದ ಎರಡು ಚೆಕ್ಕುಗಳಲ್ಲಿ ಪ್ರಸ್ತುತ ಪ್ರಕರಣದ ಚೆಕ್ಕನ್ನು ಮತ್ತು ಉಮಾ ಎಂಬುವವರು ದಾಖಲಿಸಿದ ಪ್ರಕರಣದ ಚೆಕ್ಕುಗಳು ಇವೆ ಎಂದು ನಮ್ಮ ತಾಯಿಯವರಿಗೆ ಹಸ್ತಾಂತರ ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯದ ಕುರಿತು ನಿಮಗೆ ಗೊತ್ತಿದ್ದರೂ ಸಹ ಈಗ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಾಯಿ ಬಳಿ ಇರುವ ಚೆಕ್ಕುಗಳನ್ನು ನೋಡಿ ನಮ್ಮ ತಂದೆಯವರಿಗೆ ಹಣ ಬರುವುದು ಬಾಕಿ ಇರುವುದಿದೆ ಎಂದು ಊಹಿಸಿ ಪ್ರಸ್ತುತ ಚೆಕ್ಕನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ . ನಿಮ್ಮ ತಂದೆ ಮತ್ತು ಆರೋಪಿತನ ನಡುವೆ ವ್ಯವಹಾರಗಳು ಇದ್ದವು ಎಂದರೆ ನಿಜ . ಆರೋಪಿತರು ನಿಮ್ಮೊಂದಿಗೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲವಕಾಶ ಕೋರಿದ್ದರಿಂದ ಕಲ್ಪಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

-Sd-

ಪ್ರ.ದ.ನ್ಯಾ.ದಂ. ಮುಂಡಗೋಡ.